ಓ ಎಸ್ **133/2015**

ಪಿ ಡಬ್ಲ್ಯೂ **-3**

**ದಿಃ 11.02.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಬಿ ಎಂ ವಕೀಲರಿಂದ ಃ**

ನಾನು ದಾಬಸ್ ಪೇಟೆಯ ಮಾದೇನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನಾನು ಮಿಡ್ಲಿ ಸ್ಕೂಲ್ ವರೆಗೂ ಓದಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಬರುವುದಿಲ್ಲ, ಕನ್ನಡ ಓದಲು ಬರುತ್ತದೆ. ನಾನು ಹುಟ್ಟಿದಾಗಿನಿಂದ ಮಾದೇನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನನಗೆ ಮದುವೆಯಾಗಿರುವುದು ಚಿಕ್ಕಮಸ್ಕಲ್ ಗ್ರಾಮದಲ್ಲಿ. ನನ್ನ ಮದುವೆಯಾಗಿ 68 ವರ್ಷಗಳಾಗಿರುತ್ತವೆ. ಚಿಕ್ಕಣ್ಣಪ್ಪ ಮತ್ತು ರೇವಮ್ಮ ನವರ ಆಸ್ತಿಯಲ್ಲಿ ಭಾಗ ಬರಬೇಕೆಂದು ನಾನು ಈ ದಾವೆಯಲ್ಲಿ ಹೂಡಿರುತ್ತೇನೆ.

ಈ ದಾವೆಯನ್ನು ಹೂಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯಲ್ಲಿ ವಾದಿಗಳಾಗಿ 14 ಜನ ಇರುತ್ತೇವೆ. ಅವರು ಯಾರು ಎಂದರೆ ಪಾರ್ವತಮ್ಮ, ಹೊನ್ನಗಂಗಮ್ಮ,ಸಿದ್ದಲಿಂಗಪ್ಪ, ಲಿಂಗದೇವರು, ಪುಟ್ಟಗೌರಮ್ಮ, ವಿಶ್ವನಾಥ, ಪ್ರಶಾಂತ, ಪರಮೇಶಯ್ಯ, ರೇಣುಕಯ್ಯ, ಸೋಮಶೇಖರಯ್ಯ, ಸಿದ್ದಲಿಂಗಯ್ಯ, ಶಿವಲಿಂಗಯ್ಯ ,ಸುನೀತಾ ಮತ್ತು ಸೌಮ್ಯ ಇರುತ್ತಾರೆ. ಸದರಿ ದಾವೆಯನ್ನು 2015 ರಲ್ಲಿ ಹೂಡಲಾಗಿರುತ್ತದೆ. ನಾನು ವಕೀಲರಿಗೆ ಮಾಹಿತಿ ನೀಡಿ ಈ ದಾವೆಯನ್ನು ಹಾಕಿಸಿರುತ್ತೇನೆ. ಈ ದಾವೆಯಲ್ಲಿ ಯಾರ ಯಾರ ವಿಚಾರಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ ಸಿದ್ದಲಿಂಗಪ್ಪ ರವರ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ಸಿದ್ದಲಿಂಗಪ್ಪ ನನ್ನ ಬಾಮೈದನ ಮಗನಾಗಿರುತ್ತಾನೆ. ಅವರು ಅಂದರೆ ಪ್ರಾಸಾ 1 ರವರ ಅವರ ಪ್ರಮಾಣಪತ್ರದಲ್ಲಿ ಎಲ್ಲ ವಾದಿಗಳ ಪರವಾಗಿ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಿದ್ದಲಿಂಗಪ್ಪ ಅಂದರೆ ಪ್ರಾಸಾ 1 ರವರು ಎಲ್ಲ ವಾದಿಗಳ ಪರವಾಗಿ ಮತ್ತು ಪಾರ್ವತಮ್ಮ ನವರ ಪರವಾಗಿ ಸಾಕ್ಷಿ ಈಗಾಗಲೇ ನುಡಿದಿರುತ್ತಾರೆ ಎಂದರೆ ಸರಿ. ಸಿದ್ದಲಿಂಗಪ್ಪ ಅಂದರೆ ಪ್ರಾಸಾ 1 ರವರ ಹತ್ತಿರ ನಾವೆಲ್ಲರೂ ಒಪ್ಪಿ ಕೊಂಡು ಹೇಳಿಕೆ ನೀಡಿಸಿರುತ್ತೇವೆ ಎಂದರೆ ಸರಿ.

ಈ ದಾವೆಯಲ್ಲಿ ನಾನು ಪಕ್ಷಗಾರರಾಗಿರುತ್ತೇನೆ ಎಂದರೆ ಹೌದು, ನನ್ನ ಹೆಂಡತಿ ಪಾರ್ವತಮ್ಮ ವಾದಿ ನಂಬರ್ 1 ಆಗಿರುತ್ತಾರೆ, ಅವರು ಬಿದ್ದು ಕಾಲು ಮುರಿದ ಕಾರಣ ನಾನು ನ್ಯಾಯಾಲಯಕ್ಕೆ ಎಸ್ ಪಿ ಎ ಮೂಲಕ ಬಂದಿರುತ್ತೇನೆ. ಸಿದ್ದಲಿಂಗಪ್ಪ ನನ್ನ ಪರವಾಗಿ ಹೇಳಿಕೆ ನೀಡಿರುವ ಕಾರಣ ನಾನು ಮತ್ತೆ ಸಾಕ್ಷ್ಯ ನುಡಿಯಲು ಬೇಕಾಗಿರುವುದಿಲ್ಲ ಎಂದರೆ ಸಾಕ್ಷಿ ನನ್ನನ್ನು ಕೂಡ ಸಾಕ್ಷಿ ನುಡಿಯಲು ಹೇಳಿರುವ ಕಾರಣ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ವಕೀಲರು ನನಗೆ ಸಾಕ್ಷ್ಯ ನುಡಿಯಲು ಸೂಚಿಸಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**